# ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 12.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 24.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 241.
4. **Note:** This song is not available in the books of Pavanje Guru Rao.
5. **Note:** The lyrics are same in books mentioned in Ref. 1 and Ref. 2 above. They are given without highlights. The lyrics given in Ref. 3 are slightly different. The differences are given in yellow highlights.

ರಾಗ: ಕಾಂಬೋಧಿ ತಾಳ: ಝಂಪೆ

ರಾಮ (ಎಂಬೊ) ಎನ್ನುವ ಎರಡು ಅಕ್ಷರದ ಮಹಿಮೆಯನು
ಪಾಮರರು ತಾವೇನು ಬಲ್ಲರಯ್ಯ ॥ ಪ ॥

ರಾ ಎಂದ ಮಾತ್ರದೊಳು ರಕ್ತ ಮಾಂಸದೊಳಿದ್ದ
(ಆಯಸ್ತವಾದ) ಆಯಸ್ಥಿಗತವಾದ ಅತಿ ಪಾಪವನ್ನು
ಮಾಯವನು ಮಾಡಿ ಮಹರಾಯ ಮುಕ್ತಿಯ ಕೊಡುವ
ದಾಯವನು ವಾಲ್ಮೀಕಿ ಮುನಿರಾಯ ಬಲ್ಲ ॥ 1 ॥

ಮತ್ತೆ ಮ ಎಂದೆನಲು ಹೊರಬಿದ್ದ ಪಾಪಗಳು
ಒತ್ತಿ ಒಳ ಪೊಗದಂತೆಯೆ ಕವಾಟವಾಗಿ
ಚಿತ್ತ ಕಾಯಗಳ (ಪವಿತ್ರ) ಸುಪವಿತ್ರ ಮಾಡುವ ಪರಿಯ
ಭಕ್ತವರ (ಹನುಮಂತನೊಬ್ಬ ತಾ) ಹನುಮಂತ ತಾನೊಬ್ಬ ಬಲ್ಲ ॥ 2 ॥

ಧರೆಯೊಳೀ ನಾಮಕ್ಕೆ ಸರಿಮಿಗಿಲು ಇಲ್ಲೆಂದು
ಪರಮ ವೇದಗಳೆಲ್ಲ ಪೊಗಳುತಿಹವು
ಸಿರಿಯರಸ ಶ್ರೀ ಪುರಂದರ ವಿಠಲ (ವಿಠಲನ ನಾಮವನು) ರಾಮನನು
(ಸಿರಿ) ವರ ಕಾಶಿಯೊಳಗಿಪ್ಪ ಶಿವನು ತಾ ಬಲ್ಲ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ರಾಮ ನಾಮಕ್ಕೆ ಸಮನಾದ ಇನ್ನೊಂದು ನಾಮವು ಇಲ್ಲವೆಂಬುದನ್ನು ಅದರ ಮಹಾತ್ಮ್ಯದೊಂದಿಗೆ ಈ ಹಾಡಿನಲ್ಲಿ ಹೇಳಲಾಗಿದೆ.

ಉಮಾ ಸಂಹಿತೆಯಲ್ಲಿ (3,8) ಶಿವನು ಪಾರ್ವತಿಗೆ ಹೇಳಿದನೆಂದು ಬಂದಿರುವ ಶ್ಲೋಕಗಳ ಛಾಯೆ ಇಲ್ಲಿದೆ – 'ಶ್ರೀರಾಮ ರಾಮೇತಿ ರಾಮೇ ರಾಮೇ ಮನೋರಮೇ । ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ' ॥ ಎಂಬ ಶ್ಲೋಕವೂ "ರಾಮೇತಿ ರಾಮಚಂದ್ರೇತಿ ರಾಮಭದ್ರೇತಿ ವಾ ಮನುಂ । ಯಾವಜ್ಜೀವಂ ಜಪನ್ ಮರ್ತ್ಯಃ ಜೀವನ್ಮುಕ್ತೋ ನ ಸಂಶಯಃ" ॥ ಎಂಬ ಶ್ಲೋಕವೂ ಇಲ್ಲಿ ಪ್ರಸಕ್ತವಾಗಿವೆ. ಅದೇ ಗ್ರಂಥದಲ್ಲಿ ಬ್ರಹ್ಮನು ಯಮಧರ್ಮರಾಜನಿಗೆ ಹೇಳಿದ 'ರಾ ಶಬ್ದೋಚ್ಚಾರಣಾದೇವ ಪಾತಕಾ ದೇಹ ಪಂಜರಾತ್ । ನಿರ್ಯಾತ್ಯಾಯಾಂತಿ ಪಾಪಾನಿ ಮವರ್ಣಾ ದರ್ಶನಾತ್ ಪುನಃ' ಎಂಬ ಶ್ಲೋಕದ ಛಾಯೆಯೇ ಎರಡನೆಯ ನುಡಿ. 'ಶ್ರೀಮದ್ರಾಮಾಯಣ ರಹಸ್ಯ ರತ್ನಾಕರ' ನೋಡಿ.

**ಆಯಸ್ತ** – ಯಾತನಾಮಯ.

**ದಾಯ** = ರೀತಿ

**ಕವಾಟ** = ಬಾಗಿಲು

**Classification:** Keerthane
**Ankita:** Sri Purandara Vittala
**Location:** Kashi, UP
**Category:** Rama Stuti, Mukti Marga, Sankeerna,
**Sub-Category:** Rama, papa, kashi, shiva, Valmiki, hanuma, bhumi, akshara, chitta, veda, arasa, maya, mukti,
**Pravachana:** Vid Kallapur Pavamanachar
**Explanation:** NA